ಕರ್ನಾಟಕ ಸರ್ಕಾರ
# ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOALL1/347/2022,E-894709,** **ದಿನಾಂಕ:27/09/2022**

## ಸುತ್ತೋಲೆ

**ವಿಷಯ:** ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಅಮ್ಮನಕೆರೆ, ನಾರೇಮದ್ದೇಪಲ್ಲಿ ದೊಡ್ಡಕೆರೆ ಮತ್ತು ಪಾಳ್ಯಕೆರೆ ದೊಡ್ಡಕೆರೆಯ ಮೀನು ಪಾಶುವಾರು ಹಕ್ಕನ್ನು ಮತ್ಸ್ಯಪ್ರೇಮಿ ರೈತ ಮೀನುಗಾರರ ಉತ್ಪಾದಕರ ಸಂಸ್ಥೆ ಮಾಚನಪಲ್ಲಿ ಪಾಳ್ಯಕೆರೆಗೆ ಗುತ್ತಿಗೆ ನೀಡುವ ಕುರಿತು.

**ಉಲ್ಲೇಖ:** 1) ಮೀನುಗಾರಿಕೆ ಉಪ ನಿರ್ದೇಶಕರು, ಚಿಕ್ಕಬಳ್ಳಾಪುರರವರ ಪತ್ರ ಸಂಖ್ಯೆ: ಹಗುಪ/ಎಫ್.ಪಿ.ಒ/ನೇ.ಗು/12/2022-23, ದಿನಾಂಕ: 20/09/2022.
2) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ : ಪಸಂಮೀ/ಇ-38/ಮೀಇಇ/2020, ಬೆಂಗಳೂರು ದಿ.31/12/2021.
3) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-104/ಮೀಇಇ/2022, ಬೆಂಗಳೂರು ದಿ.02/07/2022.
4) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಪಸಂಮೀ 8 ಮೀಇಇ 2015, ಬೆಂಗಳೂರು ದಿ.26/06/2015.

*****************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಅಮ್ಮನಕೆರೆ, ನಾರೇಮದ್ದೇಪಲ್ಲಿ ದೊಡ್ಡಕೆರೆ ಮತ್ತು ಪಾಳ್ಯಕೆರೆ ದೊಡ್ಡಕೆರೆಯ ಮೀನು ಪಾಶುವಾರು ಹಕ್ಕನ್ನು ಮತ್ಸ್ಯಪ್ರೇಮಿ ರೈತ ಮೀನುಗಾರರ ಉತ್ಪಾದಕರ ಸಂಸ್ಥೆ ಮಾಚನಪಲ್ಲಿ ಪಾಳ್ಯಕೆರೆಗೆ ಗುತ್ತಿಗೆ ನೀಡುವ ಸಂಬಂಧ ಮಾರ್ಗದರ್ಶನ ನೀಡುವಂತೆ ಉಲ್ಲೇಖ(1) ರಲ್ಲಿ ಕೋರಲಾಗಿದೆ.

ಉಲ್ಲೇಖಿತ ಪತ್ರವನ್ನು ಪರಿಶೀಲಿಸಲಾಗಿ, ರೈತ ಮೀನುಗಾರರ ಉತ್ಪಾದಕರ ಸಂಸ್ಥೆ ರವರಿಗೆ ಮೀನುಪಾಶುವಾರು ಹಕ್ಕು ಗುತ್ತಿಗೆ ನೀಡುವ ಸಂಬಂಧ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದೆ.

1. ಮೀನುಗಾರರ ಉತ್ಪಾದಕರ ಸಂಸ್ಥೆಯು ನೂತನವಾಗಿ ನೋಂದಣಿಯಾಗಿರುವ ಕಾರಣ ಸದರಿ ಸಂಸ್ಥೆಯವರು ಗುತ್ತಿಗೆ ಪ್ರಕಟಣೆ ಹೊರಡಿಸಿದ ಮತ್ತು ಗುತ್ತಿಗೆ ಪಡೆಯಲು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಂತರವು ಕೆಲವೊಂದು ದಾಖಲಾತಿಗಳನ್ನು ಒದಗಿಸಿರುವುದರಿಂದ ಪರಿಗಣಿಸಬಹುದಾಗಿರುತ್ತದೆ. ಉಲ್ಲೇಖ(2) ರಲ್ಲಿ ಹೊಸದಾಗಿ ನೊಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘ/ಸಂಸ್ಥೆಗಳು ನೋಂದಣಿಯಾದ ಕೂಡಲೇ ಮೀನುಪಾಶುವಾರು ಹಕ್ಕು ನೀಡುವಂತೆ ಆದೇಶಿಸಿದ್ದು, ಅದೇ ಮಾದರಿಯಲ್ಲಿ ಮೀನುಗಾರರ ಉತ್ಪಾದಕರ ಸಂಸ್ಥೆಗಳಿಗೆ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕು ಗುತ್ತಿಗೆ ನೀಡಲು ಕ್ರಮವಹಿಸುವುದು ಹಾಗೂ ಎರಡನೇ ವರ್ಷಕ್ಕೆ ಮತ್ತು ತದನಂತರದ ವರ್ಷಗಳಿಗೆ ನವೀಕರಿಸಿಕೊಳ್ಳಲು ಉಲ್ಲೇಖ(3) ರ ಅನುಬಂಧ-1ರ ಕ್ರಮ

ಸಂಖ್ಯೆ 1 ರಿಂದ 10 ರಲ್ಲಿನ ಅರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಕಡ್ಡಾಯವಾಗಿ ದಾಖಲೆಗಳನ್ನು ಸಲ್ಲಿಸತಕ್ಕದ್ದು.

2. ಸ್ಥಳೀಯ ಮೀನುಗಾರರನ್ನು ನೋಂದಾಯಿಸಿಕೊಳ್ಳದೆ ಇರುವುದರಿಂದ ಸದರಿ ಸ್ಥಳೀಯ ಮೀನುಗಾರರಿಗೆ ತೊಂದರೆಯಾಗುವ ಸಂಭವವಿರುತ್ತದೆ ಎಂದು ಅಭಿಪ್ರಾಯಿಸಿದ್ದು, ಸ್ಥಳೀಯ ಮೀನುಗಾರರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವಂತೆ ಷರತ್ತು ವಿಧಿಸಬಹುದು.

3. ಸಂಸ್ಥೆಯು 3 ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕು ಗುತ್ತಿಗೆ ಪಡೆಯಲು ಅರ್ಜಿ ಸಲ್ಲಿಸಿದಲ್ಲಿ, ಜಲಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಆರ್ಥಿಕವಾಗಿ ಸದೃಢವಾಗಿರುವುದನ್ನು ಖಾತರಿಪಡಿಸಿಕೊಂಡು ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ನೀಡಬಹುದಾಗಿರುತ್ತದೆ.

4. ಉಲ್ಲೇಖ(4) ರ ಕಂಡಿಕೆ 1 ರಲ್ಲಿ ವಿವರಿಸಿರುವಂತೆ 3 ನೇ ಕೆರೆ ಅಥವಾ ನದಿ ಭಾಗದ ಕಾರ್ಯವ್ಯಾಪ್ತಿಯಲ್ಲಿ ಸಂಘದ ಸಕ್ರಿಯ ಮೀನುಗಾರ ಸದಸ್ಯರಿದ್ದಲ್ಲಿ ಮಾತ್ರ 3 ನೇ ಜಲಸಂಪನ್ಮೂಲವನ್ನು ಪಡೆಯಲು ಮೀನುಗಾರ ಸಹಕಾರ ಸಂಘಗಳು ಅರ್ಹರಿರುವುದಾಗಿ ಆದೇಶಿಸಲಾಗಿದೆ. ಅದರಂತೆಯೇ ಮೀನುಗಾರರ ಉತ್ಪಾದಕರ ಸಂಸ್ಥೆಯು ಸಹ 3 ನೇ ಜಲಸಂಪನ್ಮೂಲವನ್ನು ಪಡೆಯುವಾಗ 3 ನೇ ಕೆರೆ ಅಥವಾ ನದಿ ಭಾಗದ ಕಾರ್ಯವ್ಯಾಪ್ತಿಯಲ್ಲಿ ಸಂಸ್ಥೆಯಲ್ಲಿನ ಸಕ್ರಿಯ ಮೀನುಗಾರ ಸದಸ್ಯರಿರಬೇಕಾಗಿರುತ್ತದೆ.

ಸಹಿ/-

ಮೀನುಗಾರಿಕೆ ನಿರ್ದೇಶಕರು

ಗೆ,

ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು
ಪ್ರತಿ: ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು
ಪ್ರತಿ: ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರು
ಪ್ರತಿ: ಹಗುಪ ಸಂಗ್ರಾಹ ಕಡತ (1) ಮಾಹಿತಿಗಾಗಿ.

ಮೀನುಗಾರಿಕೆ ನಿರ್ದೇಶಕರ ಪರವಾಗಿ